ಊ) ಮೊದಲು ನಿರ್ಧರಿಸಿದ್ದ ಪ್ರಕಾರ ಈ ಕಾಮಗಾರಿ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು?

ಋ) 1997-98ನೇ ಸಾಲಿನಲ್ಲಿ ಈ ಕಾಮಗಾರಿಗಾಗಿ ಖರ್ಚು ಮಾಡಲಿರುವ ಹಣವೆಷ್ಟು?

ಌ) ಈ ಕಾಮಗಾರಿಯನ್ನು ಶೀಘ್ರದಲ್ಲಿಯೇ ಮುಗಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) 1975-76.

ಆ) ರೂ. 1210-00 ಲಕ್ಷ

ಇ) ಪರಿಷ್ಕೃತ ಅಂದಾಜು ಮೊತ್ತ ರೂ. 1570-00 ಲಕ್ಷ

ಈ) ರೂ. 35.26 ಲಕ್ಷ

ಉ) 2572 ಹೆಕ್ಟೇರ್

ಊ) 1981-82ನೇ ಸಾಲಿನಲ್ಲಿ ಪೂರ್ಣಗೊಳ್ಳಬೇಕಾಗಿತ್ತು.

ಋ) 1997-98ನೇ ಸಾಲಿನಲ್ಲಿ ಈ ಕಾಮಗಾರಿಗೆ ರೂ. 19.95 ಲಕ್ಷ ಅನುದಾನವಿದೆ.

ಌ) ಈ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸುವ ದೃಷ್ಟಿಯಿಂದ ಕಾಮಗಾರಿಯ ವಿವಿಧ ಭಾಗಗಳನ್ನು ಟೆಂಡರ್ ಆಧಾರದ ಮೇಲೆ ವಹಿಸಕೊಡಲಾಗಿದೆ ಮತ್ತು ಗುತ್ತಿಗೆದಾರರಿಗೆ ಕಾಮಗಾರಿಯನ್ನು ನಿಗದಿತ ವೇಳೆಯಲ್ಲಿ ಮುಗಿಸಲು ಆಗಾಗ್ಗೆ ಎಚ್ಚರಿಕೆ ನೀಡಲಾಗುತ್ತಿದೆ.

ಶ್ರೀ ಎನ್.ವೈ ಗೋಪಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈಗಾಗಲೇ ಉತ್ತರವನ್ನು ಒದಗಿಸಿದ್ದಾರೆ. ಮೊಳಕಾಲ್ಮೂರು ತಾಲ್ಲೂಕಿಗೆ ಸಂಬಂಧಪಟ್ಟಿರುವಂತಹ ಜಲಾಶಯದ ಕಾಮಗಾರಿಯಾಗಿದೆ. ಇದು ರಂಗಯ್ಯನದುರ್ಗ ಜಲಾಶಯದ ಕಾಮಗಾರಿಯಾಗಿದ್ದು ಇದಕ್ಕೆ 1975ರಲ್ಲಿ ಅಡಿಗಲ್ಲು ಹಾಕಿದ್ದು, 1981-82ನೇ ಇಸವಿಯಲ್ಲಿ ಅದನ್ನು ಪೂರ್ಣ ಮಾಡುತ್ತೇವೆಂದು ಹೇಳಿ ಹಿಂದಿನ ಸರ್ಕಾರದವರು ವಚನವನ್ನು ನೀಡಿದ್ದರು. ಅದಕ್ಕೆ ತಕ್ಕಂತೆ ಪ್ರಾಜೆಕ್ಟ್ ಕಾಸ್ಟ್ ಸುಮಾರು 16 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಬೇಕು ಎಂದು ತೀರ್ಮಾನವನ್ನು ತೆಗೆದುಕೊಂಡರೂ ಕೂಡ ಇಲ್ಲಿಯವರೆಗೂ 12 ಕೋಟಿ ರೂಪಾಯಿಗಳನ್ನು ಮಾತ್ರ

ಅದರ ಮೇಲೆ ಇನ್‌ವೆಸ್ಟ್ ಮಾಡಿದ್ದಾರೆ. ಇನ್ನು ಕಾಮಗಾರಿ ಸಂಪೂರ್ಣ ಆಗಿಲ್ಲ. ಆದುದರಿಂದ ಉಳಿದಿರುವಂತಹ ನಾಲ್ಕು ಕೋಟಿರೂಪಾಯಿಗಳನ್ನು ಈಗ ಚಿಲ್ಲರೆ ಯಾಗಿ ಹತ್ತು, ಹದಿನೈದು, ಇಪ್ಪತ್ತು ಲಕ್ಷ ರೂಪಾಯಿಗಳೆಂದು ಕೊಡುವ ಬದಲು ಒಂದೇ ಸಾರಿ ನಾಲ್ಕು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಈ ಕಾಮಗಾರಿಯನ್ನು ಮಾಡಿ ಇಲ್ಲಿ ಶೇಖರಣೆಯಾದಂತಹ ನೀರನ್ನು ಬರಗಾಲಕ್ಕೆ ತುತ್ತಾದ ತಾಲ್ಲೂಕು ಎಂದು ಸರ್ಕಾರಕ್ಕೆ ಈಗಾಗಲೇ ಗಮನಕ್ಕೆ ಬಂದಿದೆ. ಈಗ ಇರತಕ್ಕಂಥ ನೀರು 7500ಎಕರೆಗೆ ಏನು ಸೀಮಿತವಾಗಿ ಇಟ್ಟುಕೊಂಡು ಅದಕ್ಕೆ ನೀರನ್ನು ಒದಗಿಸಬೇಕೆಂಬ ಬಗ್ಗೆ ಇರುವುದನ್ನು ಮತ್ತು ಇದಕ್ಕೆ ಒಂದು ನಿರ್ದಿಷ್ಟವಾದ ದಿನಾಂಕ ಮತ್ತು ಈ ಕಾಮಗಾರಿಯನ್ನು ಯಾವಾಗ ಪೂರ್ಣ ಮಾಡುತ್ತೀರೆಂದು ಮಾನ್ಯ ಸಚಿವರು ಉತ್ತರ ನೀಡಬೇಕಾಗಿ ಕೋರುತ್ತೇನೆ.

ಶ್ರೀ ತಿಪ್ಪೇಸ್ವಾಮಿ: ಮಾನ್ಯ ಅಧ್ಯಕ್ಷರೆ, ರಂಗಯ್ಯದುರ್ಗ ಪ್ರಾಜೆಕ್ಟ್ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿದೆ. ಇದು ಈಗಾಗಲೇ ಕೊನೆಯ ಹಂತದಲ್ಲಿ ಬಂದಿದೆ. ಈಗ ನೀರು ನಿಲ್ಲಿಸಿದ್ದೇವೆ. ಇನ್ನು ಉಳಿದಂತಹ ಕಾಮಗಾರಿಗೆ ಟೆಂಡರ್ ಕರೆದು ಅದನ್ನು ಖಾಯಂ ಮಾಡಿ ಗುತ್ತಿಗೆದಾರರಿಗೆ ಕೆಲಸವನ್ನು ವಹಿಸಿಕೊಟ್ಟಿದ್ದೇವೆ. ಈ ಕೆಲಸವನ್ನು ಪೂರೈಸಿಕೊಡಲು ನಾವು ಏನು ನಿಗದಿತ ವೇಳೆಯನ್ನು ಗೊತ್ತು ಮಾಡಿದ್ದೇವೆ. ಆ ವೇಳೆಯೊಳಗೆ ಈ ಕಾಮಗಾರಿಯನ್ನು ಮುಗಿಸುತ್ತೇವೆ ಮತ್ತು ಹಣವನ್ನು ಒದಗಿಸಿ ಕೊಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ವಿಷಯ: ರಾಜ್ಯದಲ್ಲಿ ಮಹಿಳಾ ಪೋಲೀಸ್ ಸಿಬ್ಬಂದಿಗೆ ಭಡ್ತಿ ಅವಕಾಶ

459 (3354)

ಶ್ರೀಮತಿ ಪ್ರಮೀಳ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳಾ ಪೊಲೀಸರ ಸಂಖ್ಯೆ ಎಷ್ಟು?

ಆ) ಪ್ರತ್ಯೇಕ ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆಯೇ?

ಇ) ಪ್ರತ್ಯೇಕವಾಗಿ ಮಹಿಳಾ ಪೊಲೀಸರಿಗೆ ಬಡ್ತಿ ಅವಕಾಶಗಳನ್ನುಕಲ್ಪಿಸಲು ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) 1,398.

ಆ) ಹೌದು.

ಇ) ಕರ್ನಾಟಕ ರಾಜ್ಯ ಪೊಲೀಸ್ ಸೇವಗಳು ಲಿಪಿಕ ವೃಂದಗಳು ಸೇರಿದಂತೆ (ನೇಮಕಾತಿ) ನಿಯಮಗಳ 1994ರ ನಿಯಮಗಳಲ್ಲಿ ಮಹಿಳಾ ಪೊಲೀಸರಿಗೆ ವೃತ್ತ ಆರಕ್ಷಕ ನಿರೀಕ್ಷಕರವರೆಗೆ ಪ್ರತ್ಯೇಕ ಬಡ್ತಿ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ಬೇರೆ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮಹಿಳಾ ಪೊಲೀಸ್ ಸಂಖ್ಯೆ ಎಷ್ಟು ಎಂದು ಕೇಳಿದ್ದು ಅದಕ್ಕೆ 1398 ಮಂದಿ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಕೇಳುವಂಥಾದ್ದು ಏನೆಂದರೆ ಮಹನೀಯರು ಎಷ್ಟು ಜನರು ಇದ್ದಾರೆ ಮಹಿಳೆಯರ ಪ್ರಪೋರ್ಷನ್ ಎಷ್ಟು ಇದೆ. ಈಗ ಮಹಿಳೆಯರಿಗೆ ಶೇ.33ರಷ್ಟು ಎಲ್ಲಾ ಸೇವಯಲ್ಲೂ ಕೊಡುತ್ತೇವೆಂದು ಹೇಳುವಂತಹ ಸಂದರ್ಭದಲ್ಲಿ ಮಹಿಳೆಯರಿಗೆ ಇದರಲ್ಲಿ ಎಷ್ಟು ಪ್ರಪೋರ್ಷನ್ ಇದೆ. ಅದನ್ನು ಇದರಲ್ಲಿ ಏನಾದರೂ ಬ್ಯಾಕ್‌ಲಾಗ್ ಮಾಡಿ ತಾವು ತುಂಬುವಂತಹ ಪ್ರಯತ್ನ ಏನಾದರೂ ಮಾಡುತ್ತೀರಾ ಎಂಬುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಎರಡನೆಯದಾಗಿ ಪ್ರತ್ಯೇಕವಾಗಿ ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆಯೇ ಎಂದರು ಕೇಳಿದ್ದೆ. ಅದಕ್ಕೆ ಉತ್ತರ ಹೌದು ಎಂದು ಕೊಟ್ಟಿದ್ದಾರೆ. ಇದನ್ನು ತಾವು ಎಷ್ಟು ಜಿಲ್ಲೆಗಳಲ್ಲಿ ಸ್ಥಾಪನೆ ಮಾಡಿದ್ದೀರಿ, ಇದರಿಂದ ಮಹಿಳೆಯರಿಗೆ ಏನಾದರೂ ಉಪಯೋಗ ಆಗಿದೆಯಾ? ಎಲ್ಲಾ ಮಹಿಳಾ ಪೊಲೀಸ್ ಠಾಣೆಯಲ್ಲೂ ಮಹಿಳಾ ಸಬ್ ಇನ್‌ಸ್ಪೆಕ್ಟರ್‌ಗಳನ್ನು ಹಾಕಿದ್ದೀರಾ? ಆ ಮಹಿಳಾ ಸಬ್ ಇನ್‌ಸ್ಪೆಕ್ಟರ್‌ಗಳಿಗೆ ಪ್ರಮೋಷನ್ ಕೊಡುವಂತಹ ಸಂದರ್ಭದಲ್ಲಿ ಮಹಿಳೆಯರಿಗೆ ಆದ್ಯತೆ ಏನಾದರೂ ಕೊಟ್ಟಿದ್ದೀರಾ? ಮಹಿಳೆಯರ ಕಷ್ಟ ಸುಖಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಅದು ಮಹಿಳೆಯರಿಗೆ ಸಾಧ್ಯವಾಗುತ್ತದೆಂಬುದು ತಮಗೆ ಗೊತ್ತಿದೆ. ಅಲ್ಲಿ ನೀವು ಮಹನೀಯರನ್ನು ಹಾಕುವುದರಿಂದ ಮಹಿಳೆಯರಿಗೆ ಅವರ ಕಷ್ಟ ಸುಖಗಳನ್ನು ಕೇಳುವಂಥಾದ್ದಕ್ಕೆ ಆಗುವುದಿಲ್ಲ, ಅಲ್ಲಿ ಕೇಸುಗಳು ರಿಜಿಸ್ಟರ್ ಕೂಡ ಆಗುತ್ತಾ ಇಲ್ಲವೆಂಬುದು ತಮಗೆ ಕಂಡು ಬಂದಿದೆಯೆ?

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಏಳು ಪೊಲೀಸ್ ಠಾಣೆಗಳು ಇವೆ. ಅವು ಬೆಂಗಳೂರು ಸಿಟಿ ಹುಬ್ಬಳ್ಳಿ, ಧಾರವಾಡ, ಮಂಗಳೂರು, ಬೆಳಗಾಂ, ಗುಲ್ಬರ್ಗಾ, ಶಿವಮೊಗ್ಗ, ಇಲ್ಲಿ ಮಹಿಳಾ ಪೊಲೀಸ್ ಠಾಣೆಗಳಿವೆ. ಈಗ ಗುಲ್ಬರ್ಗಾ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಟ್ರೈನಿಂಗ್ ಆದಮೇಲೆ ಕೂಡಲೇ ಅಲ್ಲಿ ಕೆಲಸಕ್ಕೆ ರಿಪೋರ್ಟ್ ಮಾಡಿಕೊಳ್ಳುತ್ತಾರೆ. ಇನ್ನು ಒಂಭತ್ತು ಜನ ಪೊಲೀಸ್ ಇನ್‌ಸ್ಪೆಕ್ಟರ್, 31 ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು, ಹೊಸ ಪೋಸ್ಟ್ ಕ್ರಿಯೇಟ್ ಮಾಡುವುದಕ್ಕಿದೆ. ಈಗ ಸರ್ಕಾರದ ಮುಂದೆ ಏನು ಪ್ರಪೋಸಲ್ ಇದೆ ಎಂದರೆ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಮಹಿಳಾ ಪೊಲೀಸ್ ಠಾಣೆ ಇರಬೇಕೆಂದು ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಶಿವಮೊಗ್ಗದಲ್ಲಿ ಸ್ಟೇಷನ್ ಸ್ಯಾಂಕ್ಷನ್ ಮಾಡಿ ಆರುತಿಂಗಳಾಗಿದೆ, ಆದರೆ ಅದು ಕಾರ್ಯಗತವಾಗಿಲ್ಲ.

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಅಧ್ಯಕ್ಷರೆ, ಅವರು ಟ್ರೈನಿಂಗ್ ಆದ ಕೂಡಲೇ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳುತ್ತಾರೆ. There are 9 female Police Inspectors The proposal for creation of the posts of 31 Police Sub-Inspectors is pending before the Government.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೆ, ಟ್ರೈನಿಂಗ್ ವಿಷಯ ಬೇರೆ ಆಗುತ್ತದೆ. ಅಲ್ಲಿ ಬೇಕಾದಂತಹ ಸಲಕರಣೆಗಳನ್ನು ನೀವು ಕೊಡಬೇಕಾಗುತ್ತದೆ. ಈಗ ಬೆಂಗಳೂರಿನಲ್ಲಿ ಅಲಸೂರು ಗೇಟ್ ಪೊಲೀಸ್ ಸ್ಟೇಷನ್‌ನಲ್ಲಿ ಮಹಿಳಾ ಸ್ಟೇಷನ್ ಇದೆ. ಅದು ಮಹಿಳಾ ಪೊಲೀಸ್ ಸ್ಟೇಷನ್ ಎಂದು ಹೇಳುವುದಕ್ಕಾಗುವುದಿಲ್ಲ. ನೀವು ಮಹನೀಯರಿಗೆ ಮಾತ್ರ ಚೆನ್ನಾಗಿ ಪೊಲೀಸ್ ಠಾಣೆಯನ್ನು ಮಾಡಿಕೊಡುತ್ತೀರಿ. ಅವರಿಗೆ ಬೇಕಾದಂತಹ ಸೌಕರ್ಯಗಳನ್ನು ಕೊಡುತ್ತೀರಿ. ಅವರಿಗೆ ಸೋಫಾ ಸೆಟ್‌ಗಳನ್ನು, ವೈರ್‌ಲೆಸ್ ಸೆಟ್‌ಗಳನ್ನು ಕೊಡುತ್ತೀರಿ. ಆದರೆ ಮಹಿಳಾ ಪೊಲೀಸ್ ಠಾಣೆ ಎಂದು ಏನಿದೆ, ಅಲ್ಲಿ ಪೊಲೀಸ್ ಠಾಣೆಗೆ ಹೋದಂತಹ ಮಹಿಳೆಯರು ಕೈದಿಗಳಾಗೆ ಹೋಗಬೇಕಾಗುತ್ತದೆ. ಅಲ್ಲಿ ಬೇರೆ ರೀತಿಯಾಗಿ ನೋಡುವುದಕ್ಕೆ ಆಗುತ್ತಾ ಇಲ್ಲ, ಅಲ್ಲಿ ಕಂಪ್ಲೇಂಟ್ ಕೂಡ ರಿಜಿಸ್ಟರ್ ಮಾಡುವುದಕ್ಕೆ ಆಗುತ್ತಾ ಇಲ್ಲ. ನಾನೇ ಹಲವಾರು ಬಾರಿ ಅಲ್ಲಿಗೆ ಕೆಲವರನ್ನು ಕರೆದುಕೊಂಡು ಹೋದಂತಹ ಸಂದರ್ಭದಲ್ಲಿ ರೆಕಾರ್ಡ್ ಮಾಡುವಂತಹ ಪರಿಸ್ಥಿತಿ ಕೂಡ ಇಲ್ಲ. ಆದುರಿಂದ ನೀವು ಮಹಿಳಾ ಪೊಲೀಸ್ ಠಾಣೆಯನ್ನು ಕೊಡುವುದಾದರೆ ಮಹಿಳಾ ಪೊಲೀಸ್ ಠಾಣೆಗಿರುವಂತಹ ಆ ದರ್ಜೆಯಲ್ಲಿ ಅವರಿಗೆ ಬೇಕಾದಂತಹ ಸೌಲಭ್ಯಗಳನ್ನು ಕೊಟ್ಟು ನಂತರ ಮಾಡಿದರೆ ಅದಕ್ಕೆ ಏನಾದರೂ ಒಂದು ಬೆಲೆ ಇರುತ್ತದೆಯೇ ಹೊರತು ಮತ್ತೇನೂ ಆಗುವುದಿಲ್ಲ. ಆದುದರಿಂದ ಈ ರೀತಿ ಮೇಲ್ದರ್ಜೆಗೆ ಈ ಪೊಲೀಸ್ ಠಾಣೆಗಳನ್ನು ಯಾವಾಗ ಏರಿಸುತ್ತೀರಿ? ಅವರಿಗೆ ಬೇಕಾದಂತಹ ಸಲಕರಣೆಗಳನ್ನು ಯಾವಾಗ ಕೊಡುತ್ತೀರೆನ್ನುವಂಥಾದ್ದನ್ನು ತಾವು ತಿಳಿಸಬೇಕಾಗಿ ಕೋರುತ್ತೇನೆ.

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಮಹಿಳಾ ಪೊಲೀಸ್ ಠಾಣೆ ಅಲಸೂರ್ ಗೇಟ್ ಪೊಲೀಸ್ ಠಾಣೆಯಲ್ಲಿದೆ. ಅದು ಹಳೆಯ ಬಿಲ್ಡಿಂಗ್ ಆಗಿದ್ದು, ಇದಕ್ಕೆ ಒಂದು ಪ್ರಪೋಸಲ್ ಮಾಡಿ ಹೊಸ ಬಿಲ್ಡಿಂಗ್ ಮಾಡಿ ಕೊಡಬೇಕೆಂದು ಇದ್ದೇವೆ. ನಾನೂ ಕೂಡ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಮಾನ್ಯ ಸದಸ್ಯರುಗಳು ಬೇರೆ ಏನು ಹೇಳಿದ್ದಾರೆ, ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಹೆಚ್.ಶಿವಪ್ಪ: ಮಾನ್ಯ ಅಧ್ಯಕ್ಷರೆ, ಮಹನೀಯರು ಮಹಿಳೆಯರ ಸಮಸ್ಯೆಗಳನ್ನು

ಅರ್ಥಮಾಡಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದರು. ಅದರ ಬಗ್ಗೆ ಏನಾದರೂ ಇದು ಸ್ವಂತ ಅನುಭವವೋ ಏನು ಎಂಬುದು....

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಮಹಿಳೆಯರ ಬಗ್ಗೆ ಪ್ರಶ್ನೆಯನ್ನು ಯಾವಾಗ ಕೇಳಿದರೂ ಕೂಡ ಈ ರೀತಿ ಹಾಸ್ಯವಾಗಿ ತೆಗೆದುಕೊಳ್ಳುತ್ತಾರೆ. ಯಾವಾಗ ಹಾಸ್ಯವಾಗಿ ತೆಗೆದುಕೊಳ್ಳಬೇಕೋ ಆಗ ತೆಗೆದುಕೊಳ್ಳೋಣ ನೀವು ಯಾವಾಗಲೂ ಈ ರೀತಿಯಲ್ಲೇ ಮಾಡಿದರೆ ಸರಿಯಾಗುವುದಿಲ್ಲ. ಇದು ಗಂಭೀರವಾದಂತಹ ಪ್ರಶ್ನೆ, ನೀವು ಈ ರೀತಿಯಾಗಿ ಹೇಳುವಂಥಾದ್ದು ಸರಿಯಲ್ಲ.

ಶ್ರೀ ಹೆಚ್.ಶಿವಪ್ಪ: ನಮ್ಮ ಶ್ರೀಮತಿ. ಜ್ಯೋತಿರೆಡ್ಡಿಯವರು ಹಿಂದೆ ಮಹನೀಯರಿಗೆ ಖಂಡಿತವಾಗಿಯೂ ಮಹಿಳೆಯರ ಸಮಸ್ಯೆಗಳನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವಂಥ ಶಕ್ತಿ ಇದೆ ಎಂದು ಅವರೇ ಹೇಳಿದ್ದರು. ಈ ಆಯೋಗ ರಚನೆ ಮಾಡುವ ಸಂದರ್ಭದಲ್ಲಿ ಅಧ್ಯಕ್ಷರನ್ನಾಗಿ ಯಾರನ್ನು ನೇಮಕ ಮಾಡಬೇಕೆನ್ನುವ ವಿಚಾರ ಬಂದಾಗ ಇದನ್ನು ಹೇಳಿದ್ದರು. ಹಾಗಾದರೆ ಮಹನೀಯರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಮಹಿಳೆಯರಿಗೆ ಆಗುವುದಿಲ್ಲವೋ? ಅವರು ಹಿಂದುಳಿಯುತ್ತಿದ್ದಾರೆಯೇ?

ಛೇರ್ಮನ್: ಸದಸ್ಯರು ಪ್ರಶ್ನೇ ಕೇಳುತ್ತಾರೆ, ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ, ಮಧ್ಯದಲ್ಲಿ ಮಾತನಾಡತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಮಹಿಳೆಯರು ಪ್ರಶ್ನೆಯನ್ನು ಕೇಳಿದರೆ ಪ್ರಶ್ನೆಗೆ ಮರುಪ್ರಶ್ನೆಯನ್ನು ಕೇಳಬಾರದೇನು? ಮರುಪ್ರಶ್ನೆ ಎನ್ನುವುದು ಬರೀ ಮಹಿಳೆಯರಿಗೆ ಮೀಸಲಾ? ನಾವು ಕೇಳಬಾರದೇ?

ಶ್ರೀಮತಿ. ಪ್ರಮೀಳಾ ನೇಸರ್ಗಿ: ನೀವೂ ಕೂಡ ಶಿವಪ್ಪನವರ ರೀತಿ ಪ್ರಶ್ನೆಯನ್ನು ಕೇಳಿದರೆ ನಿಮಗೂ ಆ ರೀತಿ ಹೇಳಬೇಕಾಗುತ್ತದೆ. ಆದರೆ ನೀವು ಎಂದೂ ಹಾಗೆ ಕೇಳಿಲ್ಲ, ಆದುದರಿಂದ ನೀವು ಕೇಳಿ.

ಶ್ರೀ ಹೆಚ್.ಶಿವಪ್ಪ: ನಾನು ಏನು ಕೇಳಿದ್ದೇನೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಇದನ್ನು ಹಗುರವಾಗಿ ತೆಗೆದುಕೊಳ್ಳುವುದುಬೇಡ. ನಾನು ಪ್ರಶ್ನೆಯನ್ನು ಸ್ವಲ್ಪ ಗಂಭೀರವಾಗಿ ಕೇಳುತ್ತೇನೆ, ತಮಾಷೆಯಾಗಿ ಬೇರೆ ದಿಕ್ಕಿನಲ್ಲಿ ಹೋಗಬಾರದೆನ್ನುವ ಭಾವನೆ ಅಷ್ಟೆ.

ಶ್ರೀ ಹೆಚ್.ಶಿವಪ್ಪ: ನಾವು ಯಾವುದನ್ನೂ ಲಘುವಾಗಿ ಅರ್ಥ ಮಾಡಿಕೊಳ್ಳುವುದಿಲ್ಲ, ದಯವಿಟ್ಟು ಆ ಮಹಿಳಾ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಹೆಚ್.ಎನ್.ನಂಜೇಗೌಡ: ಈ ಮಹಿಳಾ ಪೊಲೀಸರಿಗೆ ಹೇಳಿ ಶಿವಪ್ಪನವರನ್ನು ದಸ್ತಗಿರಿ ಮಾಡಿಸಬೇಕು.

ಶ್ರೀಮತಿ. ಪ್ರಮೀಳಾ ನೇಸರ್ಗಿ: ಸನ್ಮಾನ್ಯ ಅಧ್ಯಕ್ಷರೆ, ಮಹಿಳೆಯರನ್ನು ಮಧ್ಯರಾತ್ರಿಯಲ್ಲಿ ಮನೆಬಿಟ್ಟು ಓಡಿಸತಕ್ಕಂಥ ಪರಿಸ್ಥಿತಿ ಬಗ್ಗೆ ಹಲವಾರು ಬಾರಿ ನನಗೆ ದೂರವಾಣಿ ಕರೆಗಳು ಬರುತ್ತವೆ. ನಾನು ಎಲ್ಲಿಗೆ ಹೋಗಬೇಕು, ಯಾರಿಗೆ ಹೋಗಿ ದೂರ ಕೊಡಬೇಕೆಂಬ ಪ್ರಶ್ನೆ ಬರುತ್ತದೆ. ಮಹಿಳಾ ಪೊಲೀಸ್ ಠಾಣೆಗಳು ಪ್ರತಿಯೊಂದು ಬಡಾವಣೆಗಳಲ್ಲೂ ಇದ್ದು, ಅವರನ್ನು ಕೇಳತಕ್ಕಂಥವರು ಇದ್ದಿದ್ದರೆ ಈ ಪರಿಸ್ಥತಿ ಉದ್ಭವವಾಗುತ್ತಿರಲಿಲ್ಲ. ಅವರಿಗೆ ಬೇಕಾದ ಪುನರ್ವಸತಿ ಕೇಂದ್ರಗಳಲ್ಲಿ, ಕುಟುಂಬ ಸಲಹಾ ಕೇಂದ್ರಗಳಿಲ್ಲ. ಈ ರೀತಿಯಾಗಿರತಕ್ಕಂಥ ಸಂದರ್ಭದಲ್ಲಿ ಮಹಿಳಾ ಪೊಲೀಸ್ ಠಾಣೆಗಳು ಹೆಚ್ಚಾಗಬೇಕಾಗಿತ್ತು, ಮಹಿಳಾ ಪೊಲೀಸರು ಅಲ್ಲಿರಬೇಕಾಗಿತ್ತು. ನಮ್ಮ ದುರಾದೃಷ್ಟವಶಾತ್, ಈ ನಿಯಮಗಳಲ್ಲಿ ಮಹಿಳೆಯರನ್ನು ಪ್ರಮೋಷನ್ ಮಾಡತಕ್ಕಂಥ ವ್ಯವಸ್ಥೆಯನ್ನು ಇಲ್ಲಿ ಇಟ್ಟು-ಕೊಂಡಿಲ್ಲ. ಎಸ್‌ಪಿ ಹಾಗೂ ಎಸ್‌ಐಗಳಾಗತಕ್ಕಂಥ ಸಂದರ್ಭಗಳಲ್ಲಿ ಆ ಪ್ರಮೋಷನ್ ಅನ್ನು ಅವರು ಮಾಡುತ್ತಾರೆ, ಆದರೆ ಮಹಿಳಾ ಪೊಲೀಸರು ಇರುವ ಸಂದರ್ಭದಲ್ಲಿ ಈ ಕಾನೂನನ್ನು ಅವರು ವ್ಯವಸ್ಥಿತವಾಗಿ ತಡೆಹಿಡಿದಿದ್ದಾರೆ. ಮಹಿಳಾ ಪೊಲೀಸರಿಗೆ ಬಡ್ತಿ ಕೊಟ್ಟಿದ್ದರೆ ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಇವತ್ತೂ ಕೂಡ ಹಲವಾರು ಮಹಿಳೆಯರು ಇದರಲ್ಲಿ ತರಬೇತಿ ಹೊಂದಿದವರಿದ್ದರೂ ಅವರಿಗೆ ಬಡ್ತಿ ಸಿಕ್ಕಿಲ್ಲ.

ಛೇರ್ಮನ್: ತಾವು ಏನು ಪ್ರಶ್ನೆಯನ್ನು ಕೇಳಬೇಕು ಅದನ್ನು ಕೇಳಿ, ಇಂತಿಂಥ ವ್ಯವಸ್ಥೆಗಳನ್ನು ಒದಗಿಸುತ್ತೀರಾ ಎಂದು ಕೇಳಿ; ಹೇಳಿಕೆಯ ಬಗ್ಗೆ ಉತ್ತರವನ್ನು ಒದಗಿಸುವಂತೆ ಕೇಳಿ.

ಶ್ರೀಮತಿ. ಪ್ರಮೀಳಾ ನೇಸರ್ಗಿ: ಮೂರನೆ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಸದಸ್ಯರು ಬಡ್ತಿ ಅವಕಾಶಗಳ ಬಗ್ಗೆ ಏನು ಕೇಳಿದ್ದಾರೆ, ಅದರ ಬಗ್ಗೆ 9 ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಮೂವತ್ತು ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು, ಏಕೆಂದರೆ, ಯಾರು ಕಾನ್ಸ್‌ಟೇಬಲ್‌ನಿಂದ ಯಾರು ನೇಮಕವಾಗಿರುತ್ತಾರೆ ಮಹಿಳಾ ಪಿಸಿಸ್, ಅವರಿಗೆ ಬಡ್ತಿಯಾಗಿ ನಾಳೆದಿವಸ ಮಹಿಳಾ ಸಬ್‌ಇನ್ಸ್‌ಪೆಕ್ಟರ್ ಆಗಬಹುದು, ನಂತರ ಇನ್ಸ್‌ಪೆಕ್ಟರ್ ಆಗಬಹುದು ಅದರ ಜೊತೆಗೆ ಮೂರು ಮಹಿಳಾ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲಿಸ್‌ಗೆ ಕೂಡ ನಾವು ಒಂದು ಅವಕಾಶವನ್ನು ಮಾಡುತ್ತಿದ್ದೇವೆ. ಏಕೆಂದರೆ ನಾಳೆ ದಿವಸ ಇನ್ಸ್‌ಪೆಕ್ಟರ್‌ನಿಂದ ಡಿವೈಎಸ್‌ಪಿಗಳಾಗಲಿ ಎಂದು.

ಶ್ರೀಮತಿ. ಪ್ರಮೀಳಾ ನೇಸರ್ಗಿ: ಇಡೀ ಕರ್ನಾಟಕಕ್ಕೆ, ಇಷ್ಟು ಜನ ಮಹಿಳೆಯರಿಗೆ ಕೇವಲ ಇಷ್ಟು ಜನ ಸಬ್‌ಇನ್ಸ್‌ಪೆಕ್ಟರ್‌ಗಳು, ಮೂರು ಜನ ಡಿವೈಎಸ್‌ಪಿಗಳು ಸಾಕೇ

ಎನ್ನುವ ಪ್ರಶ್ನೆಯನ್ನು ನೀವೇ ಯೋಚನೆ ಮಾಡಿ ನೋಡಿ. ಅವರ ಕರೆಸ್ಪಾಂಡಿಂಗ್ ಎಷ್ಟು ಬೇಕು, ಪುರುಷರು ಎಷ್ಟು ಜನ ಡಿವೈಎಸ್‌ಪಿಗಳಿದ್ದಾರೋ ಅದಕ್ಕಿಂತ ಮೂರನೇ ಒಂದು ಭಾಗದಷ್ಟಾದರೂ ಮಹಿಳಾ ಡಿವೈಎಸ್‌ಪಿಗಳು ಬೇಕಾಗುತ್ತದೆ, ಸಬ್‌ಇನ್ಸ್‌ಪೆಕ್ಟರ್‌ಗಳು ಅಷ್ಟೆ ಬೇಕಾಗುತ್ತದೆ, ಇನ್‌ಸ್ಪೆಕ್ಟರ್‌ಗಳೂ ಕೂಡ ಅಷ್ಟೆ ಬೇಕಾಗುತ್ತದೆ, ಮಹಿಳೆಯರಿಗೋಸ್ಕರ ಮಹಿಳಾ ಪೊಲೀಸ್ ಡೈರೆಕ್ಟ್ ರೆಕ್ರೂಟ್‌ಮೆಂಟ್‌ಗೆ ಏನಾದರೂ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ಆರ್.ರೋಷನ್ ಬೇಗ್: ಆ ರೀತಿ ಅವಕಾಶವಾದಾಗ ನಾವು ನೇಮಕ ಮಾಡಿಕೊಳ್ಳುತ್ತೇವೆ. ಇದು ಒಂದು ರೀತಿಯ ಪ್ರಾಯೋಗಿಕ ಆಧಾರದ ಮೇಲೆ ಮಾಡಿರುವಂಥದ್ದು, ಕೆಲವು ಕಡೆ all-women police stations have been successful ಕೆಲವು ಕಡೆ police stations have not been very successful. ಕೆಲವು ಕಡೆ ಯಶಸ್ವಿಯಾಗಿದೆ, ಕೆಲವು ಕಡೆ ಯಶಸ್ವಿಯಾಗಿಲ್ಲ, ಇದನ್ನು ಪ್ರಾರಂಭ ಮಾಡಿದ್ದೇವೆ, ಬರುತ್ತಾ ಬರುತ್ತಾ ಅವಕಾಶಗಳನ್ನು ಕೊಡುತ್ತೇವೆ.

ಶ್ರೀ ವಾಟಾಳ್‌ನಾಗರಾಜ್: ಈಗ ಮಹಿಳಾ ಪೊಲೀಸರಿಗೆ ಬಂದೂಕದ ತರಬೇತಿಯೇನಾದರೂ ಸರ್ಕಾರ ಕೊಟ್ಟಿದ್ದೀರಾ? ಇಲ್ಲದಿದ್ದರೆ ಸುಮ್ಮನೆ ಮಹಿಳಾ ಪೊಲೀಸರು ಎಂದು ಅವರ ರಕ್ಷಣೆಗೆ ಇನ್ನೊಂದು ಪೊಲೀಸ್ ಠಾಣೆಯನ್ನು ವ್ಯವಸ್ಥೆ ಮಾಡಬೇಕಾಗುತ್ತದೆ. ಆದುದರಿಂದ ಅವರಿಗೆ ಬಂದೂಕದ ತರಬೇತಿಯನ್ನು ತಾವು ಕೊಟ್ಟಿದ್ದೀರಾ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಅವರೆಲ್ಲಾ ಪರೀಕ್ಷೆಯನ್ನು ಪಾಸ್ ಮಾಡಿಯೇ ನೇಮಕವಾಗಿರುತ್ತಾರೆ.

ಶ್ರೀ ಆರ್.ರೋಷನ್ ಬೇಗ್: ಸಭಾಧ್ಯಕ್ಷರೆ, ಬೇರೆ ಪೊಲೀಸ್ ಕಾನ್‌ಸ್ಟೇಬಲ್‌ಗೆ ಯಾವರೀತಿ ಎಷ್ಟು ತಿಂಗಳು ತರಬೇತಿಯನ್ನು ಕೊಡಬೇಕು, ಅದೇ ರೀತಿ ಮಹಿಳಾ ಕಾನ್‌ಸ್ಟೇಬಲ್‌ಗಳು ಕೂಡ ಅಲ್ಲಿ ಡಿಸ್ಟ್ರಕ್ಟ್ ಆರ್ಮ್ ರಿಸರ್ವ್ ಪೊಲೀಸ್‌ನಲ್ಲಿ ಅಷ್ಟೆ ತಿಂಗಳು ತರಬೇತಿಯನ್ನು ತೆಗೆದುಕೊಳ್ಳುತ್ತಾರೆ, ಆ ತರಬೇತಿಯಲ್ಲಿ ರೈಫಲ್ ಶೂಟಿಂಗ್ ಎಲ್ಲಾ ಇದ್ದೇ ಇರುತ್ತದೆ.

ವಿಷಯ: ರಾಜ್ಯದಲ್ಲಿ ಸಣ್ಣ ನೀರಾವರಿಗಾಗಿ ಗೊತ್ತುಪಡಿಸಿದ ಮೊತ್ತ.

245 (2094)

ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?